
# ಕಥೆಯೊಳಗಿನ ಕಥೆ

■ ಗೀತಾ ಬಿ.ಯು.
ಕಲೆ: ಈಶ್ವರ ಬಡಿಗೇರ



‘ನೀವು ಈ ಕಥೆ ಬರಿಯಲೇಬೇಕು...’

‘ಹೂಂ...’

‘ಈ ನಡುವೆ ನಿಮ್ಮ ಕಥೆಗಳನ್ನು ಯಾವ ಪತ್ರಿಕೆಯಲ್ಲೂ ಓದಿಲ್ಲ ಈ ನಡುವೆ ಏನೂ ಬರೆದಿಲ್ಲ ನೀವು...’

‘ಹೂಂ...’

‘ಆದರೆ ಈಗ ನಾನು ಹೇಳುವ ಕಥೆ, ಬರೆಯಲೇಬೇಕು...’

‘ನಾನು...’ ಮೆಲ್ಲನೆ ಮೇಲೆ ಎದ್ದೆ. ಕನ್ನಡಕ ಹುಡುಕಲು ಕನ್ನಡಕ ಬೇಕು! ಯಾರು ಫೋನ್ ಮಾಡಿರುವುದು. ಗೊತ್ತಾಗುತ್ತಿಲ್ಲ. ಒಂದಾನೊಂದು ಕಾಲದಲ್ಲಿ ನಾನು ಬರೆಯುತ್ತಿದ್ದ ಕಥೆಗಳನ್ನು ಓದುತ್ತಿದ್ದವಳಿರಬೇಕು.

‘ಕೇಳಿಸ್ತಾ ಇದೆ ತಾನೇ?’ ದನಿ ಎತ್ತರಿಸಿದಳು ಅವಳು. ನಾನು ನನ್ನ ಹಿಯರಿಂಗ್ ಏಡ್‌ನ ವಾಲ್ಯೂಂ ಕಡಿಮೆ ಮಾಡಿದೆ.

‘ಹೂಂ ಹೂಂ ನೀವ್ಯಾರು ಗೊತ್ತಾಗಲಿಲ್ಲ... ನಿಮ್ಮ ಪರಿಚಯ ಇದೆಯೆ ನನಗೆ?’ ಮೆಲ್ಲನೆ ಹೇಳಿದೆ. ಕುರ್ಚಿಯ ಮೇಲಿದ್ದ ಬಟ್ಟೆಗಳನ್ನು ಟೇಬಲ್ ಮೇಲೆ ಹಾಕಿ, ಕುರ್ಚಿಯಲ್ಲಿ ಕುಳಿತುಕೊಂಡೆ. ಮೊಬೈಲ್ ಹಿಡಿದಿರುವ ಕೈ ಅದುರಿತು.

‘ನಿಮಗೆ ಪತ್ರಗಳನ್ನು ಬರೆಯುತ್ತಿದ್ದೆ. ನಿಮ್ಮ ಫ್ಯಾನ್ ನಾನು. ನನಗೆ ಯಾವುದಾದರೂ ವಿಷಯದ ಬಗ್ಗೆ ಏನು ಅನಿಸುತ್ತಿದೆಯೋ ಹಾಗೇ ಕಥೆ ಬರೆಯುತ್ತಿದ್ರಿ. ಕರೆ ಮಾಡಿದ್ದೇನೆ ನಿಮಗೆ ಹಲವು ಬಾರಿ. ಮಾತನಾಡಿಸಿದ್ದೀರಿ. ನನ್ನ ಹೆಸರು ಕಲ್ಯಾಣಿ! ಭೇಟಿಯಾಗಿದ್ದೇವೆ ಕೂಡ! ನೆನಪಿಲ್ಲವೇ ನಿಮಗೆ?’

‘ಹಾಂ... ಹೂಂ...’

ನೆನಪು... ನೆನಪಿರುವುದೆಲ್ಲಾ ಬಾಲ್ಯದ ದಿನಗಳು... ನೆನ್ನೆ ಮೊನ್ನೆ ಎಲ್ಲಾ ಮಸುಕು ಮಸುಕು...

‘ನಿಮಗೆ ಹುಷಾರಿಲ್ಲವೇ?’ ಅವಳ ದನಿಯಲ್ಲಿದ್ದ ಕಾಳಜಿಗೆ ಅಚ್ಚರಿಯಾಯಿತು. ಕಾಳಜಿ ದನಿಯಲ್ಲಿ ಅಷ್ಟೇ. ಅವಳು ಹೇಳಬೇಕಿರುವುದು ಅವಳಿಗೆ ಮುಖ್ಯವಿತ್ತು. ನನ್ನ ಉತ್ತರಕ್ಕೆ ಕಾಯುವ ತಾಳ್ಮೆ ಅವಳಿಗಿರಲಿಲ್ಲ.

‘ನಾನು ನಿಮ್ಮ ಪುಸ್ತಕಗಳನ್ನು ಕೊಂಡಿದ್ದೇನೆ, ನೀವು ಕಾಂಪ್ಲಿಮೆಂಟರಿ ಎಂದು ಹೇಳಿದರೂ ನೀವು ಪುಸ್ತಕಗಳನ್ನು ಕೊಟ್ಟಾಗ ನಿಮಗೆ ದುಡ್ಡು ಕೊಟ್ಟಿದ್ದೇನೆ. ನೀವು ಲೆಕ್ಕ ಹಾಕದೆ ಪರ್ಸಿನೊಳಗೆ ಹಾಕಿಕೊಂಡ್ರಿ’

‘ಇಲ್ಲಿ ಎಷ್ಟು ಮಂದಿಗೆ ನಿಮ್ಮ ಪುಸ್ತಕಗಳನ್ನು ಓದಲು ಕೊಟ್ಟಿದ್ದೇನೆ ಗೊತ್ತಾ?...’

‘ಎಲ್ಲಿ ಇರುವುದು ನೀವು?’

‘ಅರೆ... ಮರೆತುಬಿಟ್ಟಿದ್ದೀರಿ ನನ್ನ!... ಕಲ್ಯಾಣಿ ನಾನು. ಎಂಟು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಾಗ ಅದೇ ಕೆಲಸವಾಗಿ ಬಂದು ನಿಮ್ಮನ್ನು ಭೇಟಿಯಾಗಿದ್ದೆ. ನಾನು ಇರುವುದು ಡೆನ್ವರ್‌ನಲ್ಲಿ. ತಾಯಿ ಮನೆ ಶಿವಮೊಗ್ಗ...’

‘ಓ... ಸರಿ... ಕಲ್ಯಾಣಿ...’ ನಾನು ಭೇಟಿ ಮಾಡಿರುವ ಮಹಿಳೆಯೇ ಅಥವಾ ನಾನು ಬರೆದಿರುವ ಯಾವುದಾದರೂ ಕಾದಂಬರಿಯ ನಾಯಕಿಯೋ ಹೆಸರು ಹೊಸದಾಗಿಯೇನು ಕೇಳಿಸುತ್ತಿಲ್ಲ.

‘ಈಗ ಶಿವಮೊಗ್ಗದಲ್ಲಿ ಯಾರು ಇಲ್ಲ. ಅಪ್ಪ ಹೋದ ಮೇಲೆ ಅಲ್ಲಿಯ ಜಮೀನು ಮನೆ ಎಲ್ಲಾ ಮಾರಿ ಅಣ್ಣ, ತಮ್ಮ ಪಾಲು ಮಾಡಿಕೊಂಡರು. ನನಗೆ ಬಂಗಾರ, ದುಡ್ಡು ಸ್ವಲ್ಪ ಕೊಟ್ಟರು. ನಾನು ಅನುಕೂಲವಾಗಿ ಇದ್ದೇನೆ. ಅದಕ್ಕೆ ನನಗೇನು ಬೇಡ ಎಂದೇ ಹೇಳಿದೆ. ಮನೆ ಇಟ್ಟುಕೊಂಡಿದ್ದರೆ ನನಗೆ ತೌರು ಇರುತ್ತಿತ್ತು. ಅವರಿಬ್ಬರೂ ಒಪ್ಪಲಿಲ್ಲ. ಹಾಳಾಗಿ ಹೋಗಲಿ ಎಂದು ಬಂದು ಸೈನ್ ಮಾಡಿ ಹೋದೆ’ ಎತ್ತರದ ದನಿ. ರಿಸೀವರ್ ಕೊಂಚ ದೂರ ಹಿಡಿದೆ.

‘ಹಾಳಾಗಿ ಹೋಗಲಿ ಎಂದು ತೌರನ್ನು ಹಾರೈಸಬಾರದು...’

‘ನಿಮ್ಮ ಕಿವಿ ಚುರುಕಿದೆ ಮೇಡಂ!’

‘ಸ್ಸರಿ.. ಉದ್ಧಾರವಾಗಲಿ ಬಿಡಿ. ಸೈನ್ ಮಾಡಲು ಕೋವಿಡ್ ಸಮಯದಲ್ಲಿ ಬಂದದ್ದು. ಹಾಗಾಗಿ ನಿಮ್ಮನ್ನು ಭೇಟಿಯಾಗಲಿಲ್ಲ. ನೀವು ಹಿಂದೆ ಇದ್ದ ಮನೆಯಲ್ಲಿ ಇರಲಿಲ್ಲ ಕೂಡ...’

‘ಹೂಂ.. ನಾನು...’

‘ನನ್ನ ಮಾತು ಬೇಕಿರಲಿಲ್ಲ ಅವಳಿಗೆ.

‘ಆದರೆ ಮೇಡಂ... ತಾಯಿಯನ್ನು ನೋಡಿಕೊಳ್ಳದೆ ಇರುವವರು ಹೇಗೆ ಉದ್ಧಾರವಾಗುತ್ತಾರೆ? ನೀವೇ ಹೇಳಿ, ಆಸ್ತಿಯೆಲ್ಲಾ ಅವರ ಹೆಸರಿಗೆ ಆದ ಮೇಲೆ ಎಲ್ಲವನ್ನೂ ಮಾರಿಬಿಟ್ಟರು. ಬೆಂಗಳೂರಿಗೆ ಎಂದೋ ಸೇರಿಯಾಗಿತ್ತು. ಅಮ್ಮನ ಮರೆತೇಬಿಟ್ಟರು...’

‘ಅಂದರೆ...’

‘ಅಮ್ಮ ಹುಟ್ಟಿ ಬೆಳೆದಿದ್ದು, ಸಂಸಾರ ಮಾಡಿದ್ದು ಎಲ್ಲಾ ಶಿವಮೊಗ್ಗದಲ್ಲಿ.. ಸುಂದರ ಹೂ ಗಿಡಗಳ ನಡುವೆ. ಈಗ ಎಪ್ಪತ್ತೈದು ವರ್ಷದ ಅಮ್ಮನನ್ನು